# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 410 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 16-02-2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ MSIL ಮದ್ಯದ ಮಳಿಗೆಗಳಿಗೆ ಮಂಜೂರಾತಿ ಕೋರಿ ಈವರೆವಿಗೂ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ ದಿನಾಂಕ:10.02.2023ರ ಅಂತ್ಯಕ್ಕೆ ಸಿಎಲ್-11ಸಿ ಸನ್ನದು ಮಂಜೂರಾತಿ ಕೋರಿ ಒಟ್ಟು 36 ಅರ್ಜಿಗಳು ಸ್ವೀಕೃತಿಯಾಗಿದ್ದು, ತಾಲ್ಲೂಕುವಾರು ವಿವರ ಕೆಳಕಂಡಂತಿದೆ. |

| ಕ್ರ ಸಂ. | ತಾಲೂಕು | ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ |
|---|---|---|
| 1 | ಬೀದರ್ | 11 |
| 2 | ಭಾಲ್ಕಿ | 03 |
| 3 | ಬಸವಕಲ್ಯಾಣ | 10 |
| 4 | ಹುಮನಾಬಾದ್ | 05 |
| 5 | ಔರಾದ್ | 07 |
| | ಒಟ್ಟು | 36 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಈ ಅರ್ಜಿಗಳ ಪೈಕಿ ಎಷ್ಟು ಅರ್ಜಿದಾರರಿಗೆ ಹೊಸ MSIL ಮದ್ಯದ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ; ಮಂಜೂರಾಗದೆ ಉಳಿದ ಅರ್ಜಿಗಳೆಷ್ಟು; ಮಂಜೂರಾಗದಿರಲು | ಸ್ವೀಕೃತಿಯಾದ ಒಟ್ಟು 36 ಅರ್ಜಿಗಳ ಪೈಕಿ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು ಇವರಿಗೆ ಒಟ್ಟು 33 ಸಿಎಲ್-11ಸಿ ಸನ್ನದುಗಳನ್ನು ಮಂಜೂರು ಮಾಡಲಾಗಿದ್ದು, ಉಳಿದ 03 ಅರ್ಜಿಗಳ ವಿವರ ಕೆಳಕಂಡಂತಿದೆ.<br>1. ಔರಾದ್ ತಾಲ್ಲೂಕಿನ ಮುಧೋಳ ಗ್ರಾಮದಲ್ಲಿ ಸನ್ನದು |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 16/02/2023 10:21 AM

| | | |
|---|---|---|
| | ಕಾರಣಗಳೇನು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | ಮಂಜೂರಾತಿ ಕುರಿತು ಸ್ವೀಕೃತವಾದ ಅರ್ಜಿಯನ್ನು ಸರ್ಕಾರದ ಪತ್ರ ಸಂಖ್ಯೆ: ಆಇ 26 ಇಎಫ್ಎಲ್ 2021 ದಿನಾಂಕ: 16.04.2022ರಲ್ಲಿ ಸನ್ನದು ಮಂಜೂರಾತಿಗೆ ಸಂಬಂಧಿಸಿದಂತೆ ಪೂರ್ವಾನುಮತಿ ನೀಡುವ ಸಂದರ್ಭದಲ್ಲಿ ಕಟ್ಟಡ ಇರುವ ಜಾಗವು ಭೂ ಪರಿವರ್ತನೆ ಆಗಿರುವ ಬಗ್ಗೆ ಖಚಿತ ಪಡಿಸಿಕೊಂಡು ಸನ್ನದು ಮಂಜೂರಾತಿ ನೀಡುವಂತೆ ತಿಳಿಸಿದ ಹಿನ್ನೆಲೆಯಲ್ಲಿ ಸದರಿ ಸ್ಥಳವು ಭೂ ಪರಿವರ್ತನೆ ಆಗದೆ ಇರುವುದರಿಂದ ತಿರಸ್ಕರಿಸಲಾಗಿರುತ್ತದೆ.<br><br>ತದನಂತರ ಸರ್ಕಾರದ ಪತ್ರ ಸಂಖ್ಯೆ:ಆಇ 11 ಪಿಇಎಸ್ 2022, ದಿನಾಂಕ:13.01.2023ರಲ್ಲಿ ಅಬಕಾರಿ ಸನ್ನದು ಮಂಜೂರಾತಿ / ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ / ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಪಡೆದಿದ್ದಲ್ಲಿ ಅಥವಾ ನಿರಾಕ್ಷೇಪಣಾ ಪತ್ರವನ್ನು (NOC) ನೀಡಿದ್ದಲ್ಲಿ, ಅಂತಹ ಪ್ರಸ್ತಾವನೆಗಳಿಗೆ ಸನ್ನದು ಮಂಜೂರಾತಿ / ಸ್ಥಳಾಂತರ ಮಂಜೂರು ಮಾಡಲು ಸರ್ಕಾರ ಅನುಮತಿಯನ್ನು ನೀಡಲಾಗಿದ್ದು, ಅದರಂತೆ, ಎಂ.ಎಸ್.ಐ.ಎಲ್ ಸಂಸ್ಥೆಯವರು ಸನ್ನದು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ ಪರಿಶೀಲಿಸಲಾಗುವುದು.<br><br>2. ಹುಲಸೂರು ಪಟ್ಟಣದಲ್ಲಿ (ಹುಲಸೂರು ತಾಲ್ಲೂಕು) ಮಂಜೂರಾತಿ ಕೋರಿ ಸ್ವೀಕೃತಿಯಾದ ಅರ್ಜಿಯು ಉದ್ದೇಶಿತ ಕಟ್ಟಡ ಸ್ಥಳವು ನಿಯಮ-5 ರನ್ವಯ ಆಕ್ಷೇಪಣಾ ಸ್ಥಳದ ವ್ಯಾಪ್ತಿಯಲ್ಲಿರುವುದರಿಂದ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ.<br><br>3. ಔರಾದ್ ತಾಲೂಕಿನ ಚಿಂತಾಕಿ ಗ್ರಾಮದಲ್ಲಿ ಸನ್ನದು ಮಂಜೂರಾತಿ ಸಂಬಂಧ ಅರ್ಜಿ ಸ್ವೀಕೃತಿಯಾಗಿದ್ದು |



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 16/02/2023 10:21 AM

ಪರಿಶೀಲನಾ ಹಂತದಲ್ಲಿರುತ್ತದೆ.

ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

| ಕ್ರ ಸಂ. | ತಾಲೂಕು | ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ | ಸನ್ನದು ಮಂಜೂರಾತಿಯಾದ ಅರ್ಜಿಗಳ ಸಂಖ್ಯೆ |
|---|---|---|---|
| 1 | ಬೀದರ್ | 11 | 11 |
| 2 | ಭಾಲ್ಕಿ | 03 | 03 |
| 3 | ಬಸವಕಲ್ಯಾಣ | 10 | 09 |
| 4 | ಹುಮನಾಬಾದ್ | 05 | 05 |
| 5 | ಔರಾದ್ | 07 | 05 |
| | **ಒಟ್ಟು** | **36** | **33** |

| | | |
|---|---|---|
| ಇ) | ಅರ್ಜಿದಾರರಿಗೆ ಹೊಸ MSIL ಮದ್ಯದ ಅಂಗಡಿಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳೇನು? | ಎಂ.ಎಸ್.ಐ.ಎಲ್ ಮದ್ಯದ ಮಳಿಗೆಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳು ಕೆಳಕಂಡಂತಿದೆ.<br><br>ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ–3(11–ಸಿ), 8, 8(ಎ) ರಲ್ಲಿ ನಿಗದಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ–5ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಸ್ಥಳೀಯ ಸಂಸ್ಥೆಗಳು, ಹಾಗೂ ಪತ್ರಾಂಕಿತ ಅಧಿಕಾರಿಗಳ ಕೇಂದ್ರ / ರಾಜ್ಯ ಸರ್ಕಾರಿ ಕಛೇರಿಗಳು ಇರುವಂತಿಲ್ಲ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: |

| | | |
|---|---|---|
| | | 12164–12166/2016ರ ದಿ:31–03–2017ರಲ್ಲಿ ಆದೇಶಿಸಿರುವಂತೆ 20,000ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ / ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000 ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ / ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:10243/2017ರಲ್ಲಿನ ದಿನಾಂಕ: 11–07–2017ರ ಆದೇಶದಲ್ಲಿ ನೀಡಿದ ಸ್ಪಷ್ಟೀಕರಣದಂತೆ, ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹಾದು ಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿರುವ ಸನ್ನದುಗಳನ್ನು ನಿಯಮಾನುಸಾರ ನವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |

ಆಇ 06 ಇಎಲ್‌ಕ್ಯೂ 2023

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು



Generated from eOffice by GOPALAIAH K, FD-EXCISE MIN(GK), EXCISE MINISTER, FINANCE DEPT.SEC on 16/02/2023 10:21 AM